ಒಂಚೂರು ತಿಂಡಿ ತಿಂದು ಕಾಲೇಜಿಗೆ ಓಡುವ ದಿನಚರಿ ಮರುಕಳಿಸಿತು. ಕಾಲೇಜಿನ ಬಿಡುವಿಲ್ಲದ ದುಡಿತ, ಸ್ಟಾಫ್‌ನವರ ಅನಗತ್ಯ ಕಿರಿಕಿರಿ ಎಲ್ಲವೂ ಮಾಮೂಲು. ಆದರೆ ಈಗ ಹೊಸತೊಂದು ಕೊಂಕು ಎದುರಾಯಿತು. ಇಂಗ್ಲಿಷ್ ಲೆಕ್ಚರರ್ ಜ್ಯೋತಿ 'ಏನ್ರೀ ವೈಶಾಲಿ, ನಿಮಗೆ ಎಂತದ್ದೋ ಆಪರೇಷನ್ ಅಂತಲ್ಲಾ' ಎಂದು ಕೆದಕಿದರು. ಉತ್ತರಿಸಲು ತಿಳಿಯದೆ ಮೌನವಾಗಿ ಕ್ಲಾಸ್‌ರೂಮಿಗೆ ಹೊರಟುಹೋಗಿದ್ದಳು. ಸದಾ ಸಂದೀಪನ ನೆನಪು. ಅವನ ಮೌನ ಇರಿಯುತ್ತಿತ್ತು. ಕಾಲ್ ಮಾಡಿದರೆ ಎರಡು ಮಾತಾಡಿ ಇಟ್ಟುಬಿಡುತ್ತಿದ್ದ. 'ಯಾಕೆ ಸಂದೀಪ್, ಏನಾಯ್ತು ನಿನಗೆ' ಎಂದರೆ 'ಹೆಚ್ಚು ಯೋಚಿಸಬೇಡ ರೆಸ್ಟ್ ತಗೋ' ಎನ್ನುತ್ತಿದ್ದ. ತನ್ನ ಅಸಹಾಯಕತೆಗೆ ಗೋಡೆಗೆ ತಲೆ ಚಚ್ಚಿಕೊಳ್ಳಬೇಕು ಅನಿಸುತ್ತಿತ್ತು ಒಮ್ಮೊಮ್ಮೆ. ಅಮ್ಮನಿಗೆ ತಿಳಿಯದಂತೆ ಮತ್ತೂ ಮೂರ್‍ನಾಲ್ಕು ಆಸ್ಪತ್ರೆಗಳಿಗೆ ಹೋಗಿ ಬಂದಳು. ಸ್ಕ್ಯಾನಿಂಗ್ ಅದೂ ಇದೂ ಅಂತೆಲ್ಲ ಮುಗಿದ ಮೇಲೆ ಡಾಕ್ಟರ್ ಹೇಳುತ್ತಿದ್ದುದು ಒಂದೇ ಮಾತು, 'ಎರಡ್ಮೂರು ತಿಂಗಳಲ್ಲಿ ಸರ್ಜರಿ ಮಾಡಿಸ್ಕೊಳ್ಳಿ'

ಆ ಸಂಜೆ ಒಬ್ಬಳೇ ಕಡಲ ತೀರಕ್ಕೆ ಹೋಗಿ ಕುಳಿತಿದ್ದಳು. ಅಲೆಗಳನ್ನು ನೂಕಿ ನೂಕಿ ದಡಕ್ಕೆ ಎಸೆಯುವ ಸಮುದ್ರ. ಆದರೂ ಹಟಬಿಡದೆ 'ನನಗೆ ನೀ ಬೇಕು' ಎನ್ನುವಂತೆ ಮರಳುವ ಅಲೆ. ಪ್ರೀತಿ ಎಂದರೆ ಏನು? ತನಗೆ ಮಗುವಾಗುವುದಿಲ್ಲ ಎಂದು ತಿಳಿದೊಡನೆ ಸಂದೀಪ ಯಾಕೆ ದೂರಾದ? 'ಅಮ್ಮನಿಗೆ ಮೊಮ್ಮಗು ಬೇಕಂತೆ. ನನಗೂ ಮಕ್ಕಳೆಂದರೆ ಇಷ್ಟ. ಆಪರೇಶನ್ ಯಾವಾಗ ಮಾಡಿಸಿಕೊಳ್ತಿ ಹೇಳು ಆವತ್ತು ಬಂದು ಹೋಗ್ತೇನೆ. ಆರಾಮಿರು ಯೋಚಿಸ್ಬೇಡ ಜಾಸ್ತಿ' ಎಂದು ಮೆಸೇಜ್ ಮಾಡಿದ್ದ. ಅವನ ತಲೆ! ಆರಾಮ ಅಂತೆ. ಏನದು ಆರಾಮ ಅಂದ್ರೆ? ಸುಮ್ನೆ ಹಾಸಿಗೆಯಲ್ಲಿ ಬಿದ್ದುಕೊಳ್ಳೋದ? ಮಗು ಬೇಕೆಂಬ ಆಸೆ ತನಗೆ ಬೆಟ್ಟದಷ್ಟಿಲ್ವ? ಮಾತೇ ಆಡದೆ ಸಂಬಂಧವನ್ನು ಕೊಲ್ಲುವ ಕ್ರೂರತನ ಮಾಡುತ್ತಿದ್ದಾನೆ. ಮನುಷ್ಯನಿಗಿಂತ ನಿರ್ಜೀವ ಸಮುದ್ರಕ್ಕೆ ಹೆಚ್ಚು ಜೀವಂತಿಕೆ, ಕಾಳಜಿ, ಪ್ರೀತಿ ಇದೆ ಅನ್ನಿಸಿ ಅಲೆಗಳಿಂದ ತೋಯಿಸಿಕೊಂಡು ಮನೆಗೆ ಮರಳಿದ್ದಳು.

***

ಮನಸ್ಸು ಗಟ್ಟಿಮಾಡಿಕೊಂಡು ಆಪರೇಶನ್‌ಗೆ ಅಣಿಯಾದಳು ವೈಶಾಲಿ. ಸಂದೀಪನಿಗೆ ವಿಷಯ ತಿಳಿಸಲು ಮನಸ್ಸಾಗಲಿಲ್ಲ. ಆ ಐದು ದಿನಗಳ ಕಾಲ ತನ್ನೊಂದಿಗೆ ಅಮ್ಮ ಮಾತ್ರ ಆಸ್ಪತ್ರೆಯಲ್ಲಿ. ಸರ್ಜರಿ ಮುಗಿದು ಐಸಿಯುನಲ್ಲಿ ತಂದು ಮಲಗಿಸಿದಾಗ ಕಣ್ಣೀರು ಕೋಡಿಯಾಗಿ ಹರಿದಿತ್ತು. ಇಡೀ ರಾತ್ರಿ ವಿಪರೀತ ಹೊಟ್ಟೆನೋವು. ಆದರೆ ದೇಹದ ನೋವಿಗಿಂತ ಮನಸ್ಸಿನ ಹಿಂಸೆಯೇ ದೊಡ್ಡದೆನಿಸುತ್ತಿತ್ತು. ನಮ್ಮವರೆಂದರೆ ಯಾರು? ಹೊರಗಿನವರೆಂದರೆ ಯಾರು? ಬಾಲ್ಯದ ಗೆಳತಿ ಸಂಗೀತಾ ಅಮೇರಿಕಾದಲ್ಲಿದ್ದರೂ ಕಾಲ್–ಮೆಸೇಜ್ ಮಾಡಿ ಪ್ರೀತಿ ಕೊಡುತ್ತಿದ್ದಳು. ಒಂದಿಬ್ಬರು ಸಹೋದ್ಯೋಗಿ ಮಿತ್ರರು ಸಾಂತ್ವನ ಹೇಳುತ್ತಿದ್ದರು. ಅಕ್ಕಪಕ್ಕದ ಮನೆಯ ಗೀತಕ್ಕ, ರಾಧಮ್ಮ ಆಸ್ಪತ್ರೆಗೆ ಊಟ ತಂದುಕೊಟ್ಟು ಸಮಾಧಾನಿಸಿ ಹೋಗುತ್ತಿದ್ದರು. ಆದರೆ ಎಲ್ಲಿಂದಲೋ ವಿಷಯ ತಿಳಿದ ಚಿಕ್ಕಮ್ಮಂದಿರು ಅಮ್ಮನಿಗೆ ಫೋನ್ ಮಾಡಿ 'ಅಯ್ಯೋ ಹೀಗೆಲ್ಲಾ ಆಯ್ತಾ ವೈಶಾಲಿಗೆ! ಪಾಪ, ಬಿಡಿ ಇನ್ನೆಂತಾ ಮದುವೆ, ಗರ್ಭಕೋಶವೇ ತೆಗೆದ ಮೇಲೆ... ಅವ್ಳು ಹೆಣ್ಣೇ ಅಲ್ವಲ್ಲಾ. ಏನೋ ಇದ್ದುದರಲ್ಲೇ ನೆಮ್ಮದಿಯಾಗಿರಿ ಅಕ್ಕಾ' ಎಂದು ಮಾತಾಡಿ ವಿಚಿತ್ರ ಸಾಂತ್ವನ ಹೇಳಿದ್ದರು!

ಸಂದೀಪ ಮತ್ತೆ ಕಾಲ್ ಮಾಡಲೇ ಇಲ್ಲ. ಅವನಮ್ಮ ಫೋನ್ ಮಾಡಿ 'ಸಂದೀಪನಿಗೆ ಬೇರೆ ಹೆಣ್ಣು ಹುಡುಕುತ್ತಿದ್ದೇವೆ ವೈಶಾಲಿ' ಎಂದು ನಿರ್ಭಾವುಕರಾಗಿ ಹೇಳಿದ್ದರು.

ಪೂರ್ತಿ ಕಟ್ಟುವ ಮೊದಲೇ ಗೂಡು ಛಿದ್ರವಾಗಿತ್ತು. ಆದರೆ ಆಶ್ಚರ್ಯವೆನಿಸಿದ್ದು ಅಮ್ಮನ ಗಟ್ಟಿತನ. ಕನಸುಗಳನ್ನು ಕೊಂದುಕೊಂಡು ತನಗಾಗಿ ಬದಲಾಗಿಬಿಟ್ಟಿದ್ದರು ಅವರು. 'ಆರೋಗ್ಯ ಸುಧಾರಿಸಲಿ ಕಣಮ್ಮ. ಬದುಕೆಂದರೆ ಬರೀ ಮದುವೆ, ಮಗು ಅಲ್ಲ. ನೀನು ನಗ್ ನಗ್ತಾ ಇರಬೇಕು' ಎಂದಿದ್ದರು. ಎಷ್ಟೋ ಸಮಯದ ನಂತರ ಸಂದೀಪನಿಗೆ ಫೋನ್ ಮಾಡಿದಳು. 'ನಮ್ಮ ಪ್ರೀತಿ ಇಷ್ಟು ಸಣ್ಣದಾ? ಮದುವೆ ಎಂದರೆ ಮಕ್ಕಳಾಚೆ ಇನ್ನೇನೂ ಇಲ್ವ? ಮಗುವೇ ಮದುವೆಯ ಗುರಿಯೇ? ನಾವು ಕನಸಿದ ಬದುಕು, ನಮ್ಮಿಬ್ಬರ ಸಾಂಗತ್ಯ. ಇಷ್ಟಕ್ಕೆ ಬೆಲೆಯಿಲ್ವೇನೊ?' ಎಂದು ಘಟ್ಟಿಸಿ ಕೇಳಿದ್ದಳು.



'ವೈಶೂ ಅದೆಲ್ಲ ಸರಿ. ಮಗುವೇ ಇಲ್ಲವಾದರೆ ಈ ಮದುವೆಗೇನು ಅರ್ಥ' ಎಂದಿದ್ದ. 'ಸರಿ ಕಣೋ. ಆದ್ರೆ ನನ್ನ ದುಃಖದಲ್ಲಿ ನಿನಗೇನೂ ಪಾಲಿಲ್ವ? ಒಂದು ವರ್ಷ ಅಷ್ಟೆಲ್ಲ ಪ್ರೀತಿಸಿದೆವಲ್ಲ. ನೀನೇ ನನ್ನ ಗಂಡ ಅಂತ ನಾನು ಬಲವಾಗಿ ನಂಬಿಕೊಂಡಿದ್ದೆ. ಆ ಭಾವನೆಗಳನ್ನೆಲ್ಲ ಮರೆಯೋದು ಹೇಗೋ?' ಎಂದದ್ದಕ್ಕೆ, 'ಸಾರಿ ವೈಶಾಲಿ, ನಂಗಿಷ್ಟ ಇಲ್ಲ' ಎಂದು ಕರೆ ತುಂಡರಿಸಿದ್ದ. ಸಂದೀಪ ಇಷ್ಟು ನಿಷ್ಠುರವಾಗಿ ಮಾತಾಡಿದ ದಿನ ಏನೇನೋ ಕನಸುಗಳು...

ತನ್ನ ಸಾವನ್ನು ತಾನೇ ಕಂಡ ಕನಸು! ಎದ್ದು ನೀರು ಕುಡಿದು ಮತ್ತೆ ಮಲಗಿದರೆ ಹೊಟ್ಟೆಯೊಳಗೆ ಮಗುವಿನ ಅಸ್ತಿತ್ವ; ಗರ್ಭಿಣಿಯಾದ ಕನಸು! ಸುಪ್ತಮನಸ್ಸಿನ ಶಕ್ತಿ ಅದ್ಭುತವೆನಿಸಿತು ಅವಳಿಗೆ. 'ನನ್ನ ಹೊಟ್ಟೆಯೊಳಗೆ ಗರ್ಭಕೋಶ ಇಲ್ಲದಿರಬಹುದು, ಆದರೆ ಹೃದಯದೊಳಗಿದೆ'. ಆ ಬೆಳಿಗ್ಗೆ ಅಮ್ಮ ಹಾಕಿಕೊಟ್ಟ ಮಸಾಲೆದೋಸೆ ತಿಂದು ತನ್ನಷ್ಟಕ್ಕೆ ಹೇಳಿಕೊಂಡಳು ವೈಶಾಲಿ.

'ಸಂದೀಪ್, ಒಂದಲ್ಲ ಒಂದು ದಿನ ನನಗೂ ಒಬ್ಬ ಸಂಗಾತಿ ಸಿಗುತ್ತಾನೆ. ವೈಶಾಲಿ ಒಬ್ಬಳು ಮನುಷ್ಯಳು ಎಂದು ಪ್ರೀತಿಯಿಂದ ಕಾಣುವ ಗಂಡಸು ಅವನು. ಕಾರಣವಿಲ್ಲದೆ ವಿಷಾದ ಆವರಿಸಿದಾಗ ಹೆಗಲು ಕೊಡುವ ಸಂಗಾತಿ. ಸಮಾಜದ ಎಲ್ಲ ಬಂಧನಗಳಾಚೆ ಕರೆದೊಯ್ಯುವ ಪ್ರೇಮಿ ಅವನು' ಎಂದು ಸಂದೀಪನಿಗೆ ಮೆಸೇಜ್ ಹಾಕಿ ಡಾಟಾ ಆಫ್ ಮಾಡಿದಳು. ಮೊಬೈಲ್ ಮೇಜಿನ ಮೇಲೆಸದಳು. 'ಅಮ್ಮ ಪೇಟೆಗೆ ಹೋಗಿಬರುತ್ತೇನೆ' ಎನ್ನುತ್ತ ಸ್ಕೂಟಿ ಹತ್ತಿ ಹೊರಟಳು.

ವೈಶಾಲಿ ಮನೆಗೆ ಮರಳಿದಾಗ ಸಂಜೆ. ಮಧ್ಯಾಹ್ನದ ಉರಿಬಿಸಿಲು ಇಳಿದು ವಾತಾವರಣ ತಂಪಾಗಿತ್ತು. ಅಮ್ಮ ಹೂವಿನ ಗಿಡಗಳಿಗೆ ನೀರುಣಿಸುತ್ತಿದ್ದರು. ಹಿತವಾದ ಮಣ್ಣವಾಸನೆ. ವೈಶಾಲಿ ಅಮ್ಮನ್ನ ತಬ್ಬಿಕೊಂಡಳು. 'ಏನೇ ಇದು ವೈಶಾಲಿ'. 'ಅಮ್ಮಾ ಸುಮಾರು ದಿನಗಳಿಂದ ನಿನಗೆ ಹೇಳಬೇಕೆಂದಿದ್ದ ವಿಷಯ. ಇವತ್ತು ಎಲ್ಲ ರೆಕಾರ್ಡ್‌ಗಳೂ ಕ್ಲಿಯರಾದವು'. 'ಯಾವ ರೆಕಾರ್ಡ್? ಏನು ವಿಷಯ?'.

'ಅಮ್ಮ ನಿಂಗೆ ಇಬ್ಬರು ಮೊಮ್ಮಕ್ಕಳು ಬರುತ್ತಿದ್ದಾರೆ'.

'ಓ, ಹೌದಾ? ಅದು ಹೇಗೆ ಮಗಳೇ?'

'ಹೂಂ ಅಮ್ಮಾ, ನಾನು ಎರಡು ಮಕ್ಕಳನ್ನು ದತ್ತು ತಗೊಳ್ಳುತ್ತಿರುವೆ. ಒಬ್ಬಳು ಪುಟ್ಟಿಗೆ ನಡೆಯಲಾಗುವುದಿಲ್ಲ. ವೀಲ್ ಚೇರ್ ಬೇಕು. ಇನ್ನೊಬ್ಬಳು ಪುಟ್ಟಿಗೆ ಈಗಿನ್ನೂ ವರ್ಷ ಅಷ್ಟೇ'. ಅಮ್ಮನ ಪ್ರತಿಕ್ರಿಯೆಗಾಗಿ ಕಾದಳು ವೈಶಾಲಿ.

ಅಮ್ಮನ ಕಣ್ಣಲ್ಲಿ ನೀರು! ಮಾತು ಹೊರಡುತ್ತಲೇ ಇಲ್ಲ. 'ಮಗಳೆಂದರೆ ಮಗಳು; ಹೂವಿನಂತಾ ಮಗಳು ನೀನು'. ಒಂದೊಂದೇ ಪದ ತಡೆತಡೆದು ಹೇಳುತ್ತ ವೈಶಾಲಿಯ ತಲೆ ನೇವರಿಸಿ ಆ ತಾಯಿ ಬಿಕ್ಕಿದರು. ಪೈಪಿನ ನೀರು ತನ್ನಷ್ಟಕ್ಕೆ ಹರಿಯುತ್ತ ದಾಸವಾಳ ಗಿಡದ ಬುಡವನ್ನು ತಣಿಸುತ್ತಿತ್ತು. ■